for the interview during February 1996 and out of these 77 candidates, 25 have been selected. ಏಜ್‌ಬಾರ್ ಆಗಿದ್ದಲ್ಲಿ ಆಗ ಸಂದರ್ಶನ ನಡೆಸಿದವರನ್ನು ಮತ್ತೆ ನೇಮಕಾತಿ ಮಾಡುವಾಗ ಪರಿಗಣಿಸಲಾಗುವುದಿಲ್ಲ. 43 ವರ್ಷ ಆದವನಿಗೆ ನಾವು ಪೋಲೀಸ್ ಕಾನ್‌ಸ್ಟೇಬಲ್ ಹುದ್ದೆಯನ್ನು ಕೊಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಂ. ಕೃಷ್ಣಮೂರ್ತಿ :- ಮಾನ್ಯ ಗೃಹ ಸಚಿವರು ಈಗ ಏನು ಹೇಳಿದರು, ಅದು ತಡೆಯಾಜ್ಞೆ ನೀಡಿದ ಮೇಲೆ ನಡೆದಂತಹದ್ದು. ಇನ್ನೇನು ಸಂದರ್ಶನದಲ್ಲಿ ಆಯ್ಕೆ ಆದವರ ಪಟ್ಟಿಯನ್ನು ಬಿಡುಗಡೆ ಮಾಡಬೇಕೆನ್ನುವ ಹಂತದಲ್ಲಿ ಸರ್ಕಾರ ತಡೆಯಾಜ್ಞೆ ನೀಡಿತು. ಕಾರಣ ಗೊತ್ತಾಗಲಿಲ್ಲ. ತಡೆಯಾಜ್ಞೆಗೆ ಸರ್ಕಾರ ಕಾರಣವನ್ನೇ ನೀಡಲಿಲ್ಲ. ಇದಾದ ಮೇಲೆ ಮೀಸಲಾತಿ ನೀತಿಯಿಂದ ಯುವಕರಿಗೆ ಅನ್ಯಾಯವಾಗಿದೆ. ಅವತ್ತು ಏನು ಸಂದರ್ಶನ ಮಾಡಿದ್ದಾರೆ, ಆ ನಿರುದ್ಯೋಗಿಗಳು ಉದ್ಯೋಗ ವಿನಿಮಯ ಕಛೇರಿಯಲ್ಲಿ ನೋಂದಣಿ ಮಾಡಿದ್ದರೂ ಕೂಡ ಅವರಿಗೆ ಸಂದರ್ಶನಕ್ಕೆ ಬಂದಿಲ್ಲ. ಇದನ್ನೂ ಕೂಡ ಮಾನ್ಯ ಗೃಹ ಸಚಿವರು ಪರಿಶೀಲನೆ ಮಾಡಬೇಕಾಗುತ್ತದೆ. ಇದರ ಬಗ್ಗೆ ಚಿಂತನೆ ಮಾಡಿ ಕ್ರಮ ತೆಗೆದುಕೊಂಡು ಯುವಕರಿಗೆ ಏನು ಅನ್ಯಾಯವಾಗಿದೆ, ಅದನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ರೋಷನ್ ಬೇಗ್ :- ಆಯಿತು, ಅದರ ಬಗ್ಗೆ ಪರಿಶೀಲಿಸುತ್ತೇನೆ.

ವಿಷಯ :- ಕೊಡಗಿನಲ್ಲಿ ಕಿರು ನೀರಾವರಿ ಯೋಜನೆ ಉಪವಿಭಾಗ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 149 (1439)

ಶ್ರೀ ಡಿ. ಎಸ್. ಮಾದಪ್ಪ (ಮಡಕೇರಿ) :- ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗಿನಲ್ಲಿ ಕಿರು ನೀರಾವರಿ ಯೋಜನೆಯ ಉಪ ವಿಭಾಗವನ್ನು ಆರಂಭಿಸುವ ಕುರಿತು ಸರ್ಕಾರ ಕೈಗೊಂಡಿರುವ ಕ್ರಮವೇನು ;

ಆ) ಈ ಯೋಜನೆಗಾಗಿ 94-95 ಹಾಗೂ 96-97 ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆಯಾದ ಹಣವೆಷ್ಟು ;

ಇ) ಯೋಜನೆಯ ಪ್ರಗತಿ ಯಾವ ಹಂತದಲ್ಲಿದೆ?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :-

ಅ) ಲೋಕೋಪಯೋಗಿ ಇಲಾಖೆಯ ದಿನಾಂಕ 23-5-96 ರ ಸರ್ಕಾರಿ ಆದೇಶದಲ್ಲಿ ನೀರಾವರಿ ಇಲಾಖೆಗೆ ಹಿಂದಿರುಗಿಸಲಾಗಿರುವ ಬಂಟ್ವಾಳ ಲೋಕೋಪಯೋಗಿ ಇಲಾಖೆಯ ಉಪವಿಭಾಗವನ್ನು ನೀರಾವರಿ ಇಲಾಖೆಯ ದಿ. 29-5-96 ರ

1	2	3
20.	ಕೊಡ ಮಂಗಳೂರು ಏತ ನೀರಾವರಿ ಯೋಜನೆಯ ಕಾಲುವೆ ಲೈನಿಂಗ್ ಕೆಲಸ.	ಅಂದಾಜು-ಪಟ್ಟಿ-ತಯಾರಿಸಬೇಕು
21.	ಹೊಂಡ ಏತ ನೀರಾವರಿ ಯೋಜನೆ ಕಾಲುವೆಯ ಲೈನಿಂಗ್ ಕೆಲಸ.	-"-
22.	ಗುಮ್ಮನಕೊಲ್ಲಿ ಏತ ನೀರಾವರಿ ಯೋಜನೆ ಕಾಲುವೆ ಲೈನಿಂಗ್ ಕೆಲಸ.	-"-
23.	ಬಲಮುರಿ ಏತ ನೀರಾವರಿ ಯೋಜನೆ ಕೊಳವೆ ಮಾರ್ಗದ ದುರಸ್ತಿ ಬಲಭಾಗ 100 ರಿಂದ 200 ಮಿ.	-"-
24.	ಹೊನ್ನಿಕೊಪ್ಪ ಆಣೆಕಟ್ಟು ಮತ್ತು ನಾಲೆಗಳ ದುರಸ್ತಿ ಹಾಗೂ ಹೂಳು ತೆಗೆಯುವುದು.	-"-
25.	ಬಾಲಾಜಿ ಆಣೆಕಟ್ಟಿನ ಮತ್ತು ನಾಲೆಯ ಹೂಳು ತೆಗೆಯುವುದು	-"-
26.	ದೇವನೂರು ಆಣೆಕಟ್ಟಿನ ಕಾಲುವೆ ದುರಸ್ತಿ	-"-
27.	ಹರಿಹರ ಮತ್ತು ನಾಲ್ಕೇರಿ ಗ್ರಾಮಗಳ ಮಧ್ಯೆ ಹರಿಯುವ ಲಕ್ಷ್ಮಣತೀರ್ಥ ಹೊಳೆಗೆ ಆಡ್ಡ ಸೇತುವೆ ನಿರ್ಮಾಣ.	-"-
28.	ಬೆಂಬೆ ಬೆಳ್ಳೂರು ಗ್ರಾಮದ ದಮನ ಕೆರೆಯ ಅಭಿವೃದ್ಧಿ.	-"-
29.	ದರಬೆ ಬೆಳ್ಳೂರು ಗ್ರಾಮದ ಕುಂಜೆ ಕೆರೆ ಅಭಿವೃದ್ಧಿ.	-"-
4702	**ಆಣೆಕಟ್ಟುಗಳು, ಪಿಕಪ್‌ಗಳು, ಬಂಡಾರಗಳು, ಮೋಕ್ಷಕ ಕಾಲುವೆ.**	
1.	ದುಡಿಮೆ ಹಳ್ಳ ಪಿಕಪ್ ದುರಸ್ತಿ	ಕಾಮಗಾರಿ ಪೂರ್ಣಗೊಂಡಿದೆ.
2.	ಆಲೂರು ದೊಡ್ಡಹಳ್ಳಿ ಪಿಕಪ್ ದುರಸ್ತಿ	-"-
3.	ದೊಡ್ಡಬ್ಬೂರು-ಪಿಕಪ್ ಮತ್ತು ಕಾಲುವೆ	-"-
4.	ಯಲಕನೂರು ಹೊಸಳ್ಳಿ ಪಿಕಪ್ ಮತ್ತು ಕಾಲುವೆ ದುರಸ್ತಿ	-"-

1	2	3
5.	ಮದಲಾಪುರ ಪಿಕಪ್ ಮತ್ತು ಕಾಲುವೆ ದುರಸ್ತಿ	ಕಾಮಗಾರಿ ಪೂರ್ಣಗೊಂಡಿದೆ.
6.	ಚಿಕ್ಕಬ್ಬೂರು ಕಾಲುವೆ ದುರಸ್ತಿ	-"-
7.	ಅರಯೂರು ಪಿಕಪ್ ದುರಸ್ತಿ	-"-
8.	ಅಡಿನಾಡೂರು ಪಿಕಪ್ ದುರಸ್ತಿ	-"-
9.	ನೇರಗ್ಗಳ್ಳಿ, ಕರ್ಕಳ್ಳಿ ಪಿಕಪ್ ದುರಸ್ತಿ	-"-
10.	ಆಲೂರು ಸಿದ್ಧಾಪುರ ಕೆರೆ ಕೋಡಿಯ ಮೇಲೆ ಪಾಲು ಸೇತುವೆ ನಿರ್ಮಾಣ.	-"-
11.	ಐಗೂರು ಪಿಕಪ್ ಮತ್ತು ಕಾಲುವೆ ದುರಸ್ತಿ	-"-
12.	ಶಾಂತವೇರಿ ಪಿಕಪ್ ಕಾಲುವೆಗಳಿಗೆ ಲೈನಿಂಗ್ ಕಾಮಗಾರಿ	-"-
13.	ಅಡನಾಡೂರು ಪಿಕಪ್ ಕಾಲುವೆಗಳಿಗೆ ಲೈನಿಂಗ್ ಕಾಮಗಾರಿ.	-"-
14.	ದುಡಿಮೆಹಳ್ಳಿ ಕಾವಡಿಕಟ್ಟಿ ಹತ್ತಿರ ಇರುವ ಅಣೆಕಟ್ಟಿಯಿಂದ 13 ಕೆರೆಗಳಿಗೆ ಕಾಲುವೆ ನಿರ್ಮಾಣ	ಕಾಮಗಾರಿ ಪ್ರಗತಿಯಲ್ಲಿದೆ.
15.	ಲಕ್ಷ್ಮಣತೀರ್ಥ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಶ್ರೀ ಮಂಗಲ ಅಣೆಕಟ್ಟು ಕಾಲುವೆ ನಿರ್ಮಾಣ.	ಅಂದಾಜು ಪಟ್ಟಿ ತಯಾರಿಸಬೇಕು.
16.	ವರೂರು ಗ್ರಾಮದ ಬಿರುಹೊಳೆ ಪಿಕಪ್ ಅಣೆಕಟ್ಟು ಕಾಲುವೆ ದುರಸ್ತಿ	-"-
17.	ಹಾತೂರು ಗ್ರಾಮದ ಹಾತೂರು ಅಣೆಕಟ್ಟು ದುರಸ್ತಿ	-"-
18.	ಮಗ್ಗುಲಗ್ರಾಮದಲ್ಲಿ ಕುಮ್ಮೆ ಹೊಳೆಯ ಕೂಡು ಹಳ್ಳಕ್ಕೆ ಪಿಕಪ್ ನಿರ್ಮಾಣ	-"-
19.	ಬೆಟ್ಟಂಗಾಲ ಗ್ರಾಮದಲ್ಲಿ ಕುಮ್ಮೆ ಹೊಳೆಯ ಕೂಡು ಹಳ್ಳಕ್ಕೆ ಪಿಕಪ್ ನಿರ್ಮಾಣ	-"-
20.	ಚಿಟೊಳ ಗ್ರಾಮದ ಹಳ್ಳಕ್ಕೆ ಪಿಕಪ್ ನಿರ್ಮಾಣ ಮತ್ತು ದುರಸ್ತಿ	-"-

18.	ಬಾಲಾಜಿ ಆಣೆಕಟ್ಟಿನ ಮೇಲ್ಭಾಗದಲ್ಲಿ ಕೀರ ಹೊಳೆಯ ದಂಡೆಯ ಇಕ್ಕಲಗಳಲ್ಲಿ ಪ್ರವಾಹ ನಿಯಂತ್ರಣ ಕಾಮಗಾರಿ	ಕಾಮಗಾರಿ ಮುಗಿಯುವ ಹಂತದಲ್ಲಿದೆ.
19.	ಕಾನೂರು ಗ್ರಾಮದಲ್ಲಿ ಪ್ರವಾಹ ನಿಯಂತ್ರಣ ಕಾಮಗಾರಿ	ಅಂದಾಜು ಪಟ್ಟಿ ತಯಾರಿಸಬೇಕಾಗಿದೆ
20.	ಕಣಿವೆ ಹತ್ತಿರ ರಂಗಸ್ವಾಮಿ ಮನೆ ಹತ್ತಿರ ಕಾವೇರಿ ನದಿ ದಂಡೆ ತಡೆಗೋಡೆ ನಿರ್ಮಿಸುವುದು	-"-
21.	ಭಾಗಮಂಡಲದಲ್ಲಿ ಕಾವೇರಿ ತೀರ್ಥ ಸ್ನಾನ ಘಟ್ಟದಿಂದ ಕೆಳಬದಿ ಹೊಳಯ ಪ್ರವಾಹ ನಿಯಂತ್ರಣ ಕಾಮಗಾರಿ	-"-
22.	ಕಿಮ್ಮೂರು ಗ್ರಾಮದಲ್ಲಿ ಪ್ರೊವಿಲಂಗಡ ಗೋಪಾಲರವರ ಹೊಲದ ಬದಿಯಲ್ಲಿ ರಾಮತಿರ್ಥ ನದಿ ಪ್ರವಾಹ ನಿಯಂತ್ರಣ ಕಾಮಗಾರಿ	-"-
23.	ಜಿಸಗೂರು ಗ್ರಾಮದಲ್ಲಿ ಕೀರೆ ಹೊಳೆ ಪ್ರವಾಹ ನಿಯಂತ್ರ ಕಾಮಗಾರಿ	-"-
24.	ಶ್ರೀಮಂಗಲ ರಸ್ತೆ ಬದಿ ಲಕ್ಷ್ಮಣ ನದಿ ಪ್ರವಾಹ ನಿಯಂತ್ರ ಕಾಮಗಾರಿ	-"-
25.	ಪೊನ್ನಂಪೇಟಿ ಕಾನೂರು ರಸ್ತೆ ಬದಿ ಲಕ್ಷ್ಮಣ ತೀರ್ಥ ನದಿ ಪ್ರವಾಹ ನಿಯಂತ್ರಣ ಕಾಮಗಾರಿ	-"-
26.	ಗೋಣಿಕೊಪ್ಪಲಿನ ಸೇತುವೆಯ ಮೇಲ್ಭಾಗ ಕೀರೆ ಹೊಳೆ ದಂಡೆಯ ಪ್ರವಾಹ ನಿಯಂತ್ರಣ ಕಾಮಗಾರಿ	-"-
27.	ಬಾಲೆ ಹೋಬಳಿ ನಲ್ಲೂರು ಗ್ರಾಮದ ಬೆಟ್ಟು ಮೂಕ ನಾಡಯ್ಯನ ಹೊಲದ ಬಳಿ ಕೀರ ಹೊಳೆ ಪ್ರವಾಹ ನಿಯಂತ್ರಣ ಕಾಮಗಾರಿ	-"-
28.	ಕೂಟ್ಟಗೇರಿ ಗ್ರಾಮದಲ್ಲಿ ಲಕ್ಷ್ಮಣ ತೀರ್ಥ ನದಿ ಪ್ರವಾಹ ನಿಯಂತ್ರಣ ಕಾಮಗಾರಿ	-"-

ಶ್ರೀ ಡಿ. ಎಸ್. ಮಾದಪ್ಪ :- ಮಾನ್ಯ ಅಧ್ಯಕ್ಷರೇ, ಕೊಡಗು ಜಿಲ್ಲೆಯಲ್ಲಿ ಸಣ್ಣ ನೀರಾವರಿಯ ಒಂದು ಉಪವಿಭಾಗ ಇಲ್ಲ. 1986 ರಲ್ಲಿ ಈ ಉಪ ವಿಭಾಗ ಇತ್ತು. ಅದನ್ನು ವರ್ಗಾಯಿಸಿ ಕೊಡಗು ಜಿಲ್ಲೆಯನ್ನು ಈ ನೀರಾವರಿ ಯೋಜನೆಯಲ್ಲಿ ಬಹಳವಾಗಿ ಕಡೆಗಣಿಸಿದ್ದಾರೆ. ಒಂದು ಉಪ ವಿಭಾಗವೂ ಇಲ್ಲಿ ಇಲ್ಲ. ನಮ್ಮ ಜಿಲ್ಲೆಗೆ ಉಪ ವಿಭಾಗದ ಅವಶ್ಯಕತೆ ಇದೆ. ಮಾನ್ಯ ಸಚಿವರು ಲೋಕೋಪಯೋಗಿ ಇಲಾಖೆಯು 1996 ರಲ್ಲಿ ಈ ಉಪ ವಿಭಾಗವನ್ನು ನೀರಾವರಿ ಇಲಾಖೆಗೆ ಹಿಂದಿರುಗಿಸಿದ್ದನ್ನು ತಡೆ ಹಿಡಿದಿದ್ದಾರೆ ಎಂದು ತಿಳಿಸಿದ್ದಾರೆ. ಈ ಸಣ್ಣ ನೀರಾವರಿ ಯೋಜನೆಗೆ 1994-95 ರಲ್ಲಿ ಯೋಜನೆ ಮತ್ತು ಯೋಜನೇತರದಲ್ಲಿ 53 ಲಕ್ಷ, 1995-96 ರಲ್ಲಿ 77 ಲಕ್ಷ ಬಿಡುಗಡೆ ಮಾಡಲಾಗಿದೆ. ಆದರೆ 1996-97 ರಲ್ಲಿ ಕೇವಲ 4 ಲಕ್ಷ ಮಾತ್ರ ಬಿಡುಗಡೆ ಮಾಡ ಲಾಗಿದೆ. ಮಾನ್ಯ ಅಧ್ಯಕ್ಷರೇ, ಕೊಡಗು ಜಿಲ್ಲೆಯಲ್ಲಿ ಏಕೆ ಮಳೆ ಕಡಿಮೆಯಾಗುತ್ತಿದೆ ಎಂದರೆ, ಹಿಂದೆ ಆಲ್ಲಿ ಬಹಳ ಕೆರೆಗಳಿದ್ದವು, ಕಾಡುಗಳಿದ್ದವು. ನೀರಿನ ತೇವ ಇರುತ್ತಿತ್ತು, ಮೋಡಗಳು ಆಕರ್ಷಿತವಾಗುತ್ತಿದ್ದವು. ಕೊಡಗು ಜಿಲ್ಲೆಯಲ್ಲಿ ಸಣ್ಣ ನೀರಾವರಿ ಕಾಮಗಾರಿಗಳನ್ನು ಮಾಡದೇ ಇವತ್ತು ಮಳೆ ಕಡಿಮೆಯಾಗಿದೆ. ಇವತ್ತು ಆಲ್ಲಿ ಜನರಿಗೆ ಕುಡಿಯುಲಿಕ್ಕೆ ನೀರಿಲ್ಲ. ಕೆರೆಗಳಲ್ಲಿದ್ದ ನೀರೆಲ್ಲಾ ಇವತ್ತು ಬತ್ತಿ ಹೋಗಿದೆ. ನಾಲ್ಕು ಸಾವಿರ ಕೊಳವೆ ಬಾವಿಗಳನ್ನು ತೋಡಿಸಿ, ನೀರು ಬಹಳ ಕೆಳಕ್ಕೆ ಹೋಗಿದೆ. ಎಲ್ಲಾ ಕೆರೆಗಳೂ ಬತ್ತಿ ಹೋಗಿದೆ. ತೆರೆದ ಬಾವಿಗಳೂ ಕೂಡ ಬತ್ತಿ ಹೋಗಿವೆ. ಹಾಗಾಗಿ ನಮ್ಮ ಕೊಡಗು ಜಿಲ್ಲೆಗೆ ಒಂದು ಉಪ ವಿಭಾಗವನ್ನು ಕೊಡಬೇಕು ಮತ್ತು ಹೆಚ್ಚು ಹಣವನ್ನು ಕೊಡತಕ್ಕಂತಹ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ತಿಪ್ಪೇಸ್ವಾಮಿ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಂತೆ, ಆಲ್ಲಿ ಒಂದು ಮೈನರ್ ಉಪವಿಭಾಗ ಇತ್ತು. ನಾವು ಈ ಸಣ್ಣ ನೀರಾವರಿ ಇರುವುದನ್ನು ಬೇರೆ ಮಾಡಬೇಕು ಎಂದು ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಿಯಾದ ಮೇಲೆ, ಲೋಕೋಪಯೋಗಿ ಇಲಾಖೆ ತನ್ನ ದಿನಾಂಕ 23-5-96 ರ ಆದೇಶವನ್ನು ತಡೆಹಿಡಿದಿದೆ. ಮಾನ್ಯ ಸದಸ್ಯರು ಏನೊಂದು ಭಾವನೆಯನ್ನು ವ್ಯಕ್ತಪಡಿಸುತ್ತಾರೋ ಅದೇ ಭಾವನೆಯನ್ನು ಜಿಲ್ಲಾ ಉಸ್ತುವಾರಿ ಮಂತ್ರಿಗಳಾದ ಮಾನ್ಯ ನಾಣಯ್ಯನವರೂ ಕೂಡ ನನ್ನ ಹತ್ತಿರ ಪದೇ ಪದೇ ವ್ಯಕ್ತಪಡಿಸುತ್ತಾ, ಕೊಡಗು ಜಿಲ್ಲೆಗೆ ಒಂದು ಸಣ್ಣ ನೀರಾವರಿ ಉಪ ವಿಭಾಗವನ್ನು ತೆರೆಯಬೇಕೆಂದು ಹೇಳಿದ್ದಾರೆ. ತಡೆಯಾಜ್ಞೆಯನ್ನು ತೆರವು ಮಾಡಿಸಲು ನಾನು ಪ್ರಯತ್ನಿಸಿ, ನಿಮ್ಮ ಬೇಡಿಕೆಯನ್ನು ಈಡೇರಿಸುತ್ತೇನೆ.

ಶ್ರೀ ಹೆಚ್. ಡಿ. ಬಸವರಾಜ್ :- 29-5-96 ರಲ್ಲಿ ಆದೇಶ ಹೊರಡಿಸಿದ್ದಾರೆ. 1994-95 ಕ್ಕೆ ಯೋಜನೆಯಲ್ಲಿ 38-30 ಲಕ್ಷ ರೂ. ಗಳು ಮತ್ತು ಯೋಜನೇತರದಲ್ಲಿ 15-38, ಲಕ್ಷ ರೂ.ಗಳು 1995-96ಕ್ಕೆ ಯೋಜನೆಯಲ್ಲಿ 61.55 ಲಕ್ಷ ರೂ.ಗಳು ಮತ್ತು ಯೋಜನೇತರದಲ್ಲಿ 16-11 ಲಕ್ಷ ರೂ.ಗಳು 1996-97 ಕ್ಕೆ ಯೋಜನೆಯಲ್ಲಿ 2-05 ಲಕ್ಷ ರೂ. ಗಳು ಮತ್ತು ಯೋಜನೇತರದಲ್ಲಿ 1.31 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಇವರು 1995-96 ರಲ್ಲಿ ಕೊಟ್ಟಂತಹ ಸಂದರ್ಭದಲ್ಲಿ